ಮಂತ್ರಿಯವರಿಂದ ಹೇಳಿಕೆ

ಕರ್ನಾಟಕ ಲೋಕಸೇವಾ ಆಯೋಗದ ಸಹಾಯಕ ಕಾರ್ಯದರ್ಶಿಯವರು ಎರಡು ಸಲ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣಗೊಳಿಸಿರುವುದು

ಶ್ರೀ ಜಿ. ಬಸವಣ್ಣಪ್ಪ (ಮಾನ್ಯ ಆಹಾರ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ (೧೧-೨-೬೭) ಮಾನ್ಯ ಸದಸ್ಯರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ತಿಳಿಳಿನೇ ನಿಯಮದನ್ವಯ ಪ್ರಸ್ತಾಪ ಮಾಡಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಈ ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ನೀಡಬಯಸುತ್ತೇನೆ.

''ಕರ್ನಾಟಕ ಸಚಿವಾಲಯ ಸೇವಾ ಸರ್ಕಾರೀ ಅಧೀನ ಕಾರ್ಯದರ್ಶಿ ಶ್ರೀ ಎಸ್.ಎಲ್. ಕುಲಕರ್ಣಿ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರಿ ಅಧೀನ ಕಾರ್ಯದರ್ಶಿ ಆಗಿದ್ದಾಗ ನಿಯೋಜನೆ ಮೇಲೆ ಅವರನ್ನು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು. ಮೇಲ್ಕಂಡ ಅಧಿಕಾರಿಯು ೧೯೬೩-೬೪ನೇ ಸಾಲಿನಲ್ಲಿ ತಾ: ೩-೬-೬೩ ರಿಂದ ೩೦ ದಿನಗಳ ಅವರ ಹಕ್ಕಿನಲ್ಲಿದ್ದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ಅದನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ''೩'' ಅನುಸೂಚಿಯ ಪ್ರಕಾರ ನಗದೀಕರಣಗೊಳಿಸಿ ಕೊಂಡಿದ್ದರು. ಆ ನಗದೀಕರಣ ೧೯೬೩-೬೪ನೇ ಬ್ಲಾಕಿನ ವ್ಯಾಪ್ತಿಯಲ್ಲಿತ್ತು. ಮೇಲ್ಕಂಡ ಅಧಿಕಾರಿಯು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಸಹಾಯಕ ಕಾರ್ಯದರ್ಶಿಯಾಗಿ ತಾ:೩-೨-೬೪. ರಿಂದ ನಿಯೋಜನೆ ಮೇಲೆ ಇದ್ದಾಗ ಬ್ಲಾಕ್ ಅವಧಿಯನ್ನು ಅವರು ತಪ್ಪಾಗಿ ಅರ್ಥ ಮಾಡಿಕೊಂಡು ಆಯೋಗದಲ್ಲಿ ಪುನಃ ಅವರ ಹಕ್ಕಿನಲ್ಲಿದ್ದ ೩೦ ದಿನಗಳ ಗಳಿಕೆ ರಜೆಯನ್ನು ಅಧ್ಯರ್ಪಿಸಿ ನಗದೀಕರಣಗೊಳಿಸಲು ಕೋರಿದ್ದರು. ಆಯೋಗದವರು ಆ ಅಧಿಕಾರಿಯು ಆ ಬ್ಲಾಕ್ ಅವಧಿಯಲ್ಲಿ ಗಳಿಕೆ ರಜೆಯ ನಗದೀಕರಣ ಪಡೆದಿದ್ದರೆ ಎಂಬ ಬಗ್ಗೆ ಮಾಹಿತಿಯನ್ನು ಸರ್ಕಾರದಿಂದ ತರಿಸಿಕೊಳ್ಳದೆ ಹಾಗೂ ಅವರಿಗೆ ನಗದೀಕರಣದ ಸೌಲಭ್ಯ ಸಲ್ಲುವ ನಿಬಂಧನೆಗೆ ಒಳಪಟ್ಟು ಅವರಿಗೆ ಆ ರಜೆಯನ್ನು ಮಂಜೂರು ಮಾಡಿ ರೂ.೨,೫೧೨.೫೦ ಗಳನ್ನು ಪಾವತಿ ಮಾಡಿದ್ದಾರೆ. ಈ ನ್ಯೂನತೆ ಪತ್ತೆಯಾದ ಕೂಡಲೇ ಸದರಿ ಅಧಿಕಾರಿಯು ಅವರು ಪಡೆದಿದ್ದ ನಗದೀಕರಣ ರಜೆಯ ಹೊತ್ತವನ್ನು ತಕ್ಷಣ ತಾ: ೧೯-೮-೬೪ ರಂದು ಖಜಾನೆಗೆ ಮರುಪಾವತಿ ಮಾಡಿದ್ದಾರೆ. ಈ ಪ್ರಕರಣದಲ್ಲಿ ಯಾವುದೇ ದುರುದ್ದೇಶ ಇರಲಿಲ್ಲ. ಆಯೋಗದವರು ಆ ಅಧಿಕಾರಿಗೆ ಲಭ್ಯವಾಗಬೇಕಾಗಿದ್ದ ಗಳಿಕೆ ರಜೆ ನಗದೀಕರಣ ಮಾಹಿತಿಯನ್ನು ಸರ್ಕಾರದಿಂದ ಪಡೆಯದೆ ಹಾಗೂ ಆ ಬ್ಲಾಕ್ ಅವಧಿಯನ್ನು ಸರಿಯಾಗಿ ವಿಶ್ಲೇಷಿಸದೆ ಸದರಿ ಅಧಿಕಾರಿಯು ದುರುದ್ದೇಶವಿಲ್ಲದೆ ಮತ್ತು ಮೇಲ್ಕಂಡ ಹೊತ್ತವು ದುರುಪಯೋಗವಾಗದಂತೆ ಪುನಃ ಮರುಪಾವತಿ ಮಾಡಿರುವುದರಿಂದ ಆ ವಿಷಯವನ್ನು ತೀವ್ರವಾಗಿ ಪರಿಗಣಿಸಬೇಕಾಗುವುದಿಲ್ಲ.

ಈ ಪ್ರಕರಣದಲ್ಲಿ ಯಾವುದೇ ಅಧಿಕಾರಿಗಳೂ ಶಾಮೀಲಾಗಿಲ್ಲ. ಇದು ಭ್ರಷ್ಟಾಚಾರದ ಪ್ರಕರಣ ಅಲ್ಲ. ಮೇಲ್ಕಂಡ ಪ್ರಕರಣದಲ್ಲಿ ಆ ಅಧಿಕಾರಿಯು ಯಾವುದೇ ದುರ್ನಡತೆಯನ್ನೂ ಮೇಲ್ನೋಟಕ್ಕೆ ಎಸಗಿಲ್ಲದ ಕಾರಣ ಅವರನ್ನು ಅಮಾನತ್ತಿನಲ್ಲಿಡುವ ಅವಶ್ಯಕತೆ ಇರುವುದಿಲ್ಲ.

(೨) ಜಿಲ್ಲಾಪರಿಷತ್ ಸದಸ್ಯರಿಗೆ ವಿಧಾನಸೌಧದೊಳಗೆ ಬರಲು ಗುರುತಿನ ಚೀಟಿ ನೀಡುವಬಗ್ಗೆ

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಸ್ವಲ್ಪ ಹೊತ್ತಿಗೆ ಮುಂಚಿತವಾಗಿ ಮಾನ್ಯ ಸದಸ್ಯರಾದ ಬಿ.ಎ. ಉಮರಬ್ಬನವರು ನಿಯಮ ೩೩ಳಿಳಿಲ್ಲಿ ಸರ್ಕಾರದ ಗಮನ ಸೆಳೆದಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

''ಜಿಲ್ಲಾ ಪರಿಷತ್ತು ಸದಸ್ಯರುಗಳು ಸಾರ್ವಜನಿಕರ ಕೆಲಸದ ನಿಮಿತ್ತ ವಿಧಾನಸೌಧದಲ್ಲಿ ಅಧಿಕಾರಿಗಳೊಡನೆ ಅಥವಾ ಸಚಿವರುಗಳೊಡನೆ ಚರ್ಚಿಸುವ ಸಲುವಾಗಿ ವಿಧಾನಸೌಧಕ್ಕೆ ಬರುವುದಾದಲ್ಲಿ ಅವರು ವಿಧಾನಸೌಧದ ಸ್ವಾಗತಕಾರರಿಗೆ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ವಿಧಾನ ಸೌಧದ ಒಳಗಡೆ ಪ್ರವೇಶಿಸಬಹುದಾಗಿದೆ. ಈ ಬಗ್ಗೆ ಸಂಬಂಧ ಪಟ್ಟವರಿಗೆ ಸೂಕ್ತ ಆದೇಶವನ್ನು ನೀಡಿದ್ದೇನೆ.

ವಿಧಾನ ಮಂಡಲದ ಕಲಾಪಗಳು ನಡೆಯುವ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಗೆ ಹೋಗಲು ಅವಕಾಶ ಕಲ್ಪಿಸಿಕೊಡುವ ವಿಷಯವು ಮಾನ್ಯ ವಿಧಾನ ಸಭಾಧ್ಯಕ್ಷರ ಮತ್ತು ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಸಂಬಂಧಿಸಿದ್ದು. ಈ ವಿಷಯವನ್ನು ಅವರು ಪರಿಶೀಲಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸಿರುವ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ ಇನ್ನು ೧೯ ಮಂದಿ ಸದಸ್ಯರು ಮಾತನಾಡುವವರಿದ್ದಾರೆ. ಈಗ ಎರಡು ಗಂಟೆ ಇಪ್ಪತ್ತು ನಿಮಿಷಗಳಾಗಿದೆ. ಒಬ್ಬೊಬ್ಬರಿಗೂ ಹತ್ತು ನಿಮಿಷಗಳನ್ನು ಕೊಟ್ಟು ಚಾಲು ಮಾಡಿದರೂ ಕೊನೇಪಕ್ಷ ಐದೂವರೆ ಗಂಟೆಯಾಗುತ್ತದೆ. ೧೯ ಜನ ಸದಸ್ಯರುಗಳಲ್ಲಿ ಯಾರಾದರೂ ಇಲ್ಲದಿದ್ದರೆ ಅವರ ವೇಳೆಯನ್ನೂ ಸಹ ಸದುಪಯೋಗ ಪಡಿಸಿಕೊಳ್ಳಬಹುದು.

ಶ್ರೀ ಬಿ.ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ತಾವು ಮೊನ್ನೆ ದಿವಸ ಹೇಳಿದ್ದೀರಿ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ೧೫ ನಿಮಿಷ ಹೆಚ್ಚಾಗಿ ಕೊಡುತ್ತೇನೆಂದು. ದಯವಿಟ್ಟು ಅವಕಾಶವನ್ನು ಕೊಡಿ.

ಅಧ್ಯಕ್ಷರು.—೧೯ ಜನ ಮಾನ್ಯ ಸದಸ್ಯರು ಇದ್ದಾರೆ. ೯ ಜನ ಮಾನ್ಯ ಸದಸ್ಯರು ಮೊಟಕು ಮಾಡಿಕೊಟ್ಟರೂ ಇನ್ನೂ ಹತ್ತು ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ. ಶ್ರೀ ಡಿ.ಟಿ. ಜಯಕುಮಾರ್‌ರವರೇ ತಾವು ಹತ್ತು ನಿಮಿಷ ಮಾತನಾಡಿ ತಮ್ಮ ಭಾಷಣವನ್ನು ಮುಗಿಸಿ.

† ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮೂರು ದಿವಸಗಳಿಂದ ಸಾಕಷ್ಟು ಚರ್ಚೆ ಈ ಸಭೆಯಲ್ಲಿ ನಡೆದಿದೆ. ಈ ಸದನದ ಮೂಲ ಉದ್ದೇಶ ಶ್ರೀಸಾಮಾನ್ಯನ ಬದುಕು ಒಳ್ಳೆಯದಾಗಬೇಕು, ಆತನಿಗೆ ಮೂಲಭೂತವಾಗಿ ಬೇಕಾದಂಥ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ, ಉಳಿದುಕೊಳ್ಳುವುದಕ್ಕೆ ಸೂರು, ಜೊತೆಗೆ ಈ ರಾಷ್ಟ್ರದಲ್ಲಿ ನೆಮ್ಮದಿ, ಶಾಂತಿಯಿಂದ ಬದುಕಬೇಕು ಎನ್ನುವುದೇ ಮೂಲ ಭೂತವಾದ ಉದ್ದೇಶವಾಗಿದೆ. ಇದು ಈ ಸದನದ್ದೇ ಅಲ್ಲ ಪ್ರಜಾಪ್ರಭುತ್ವದ ಮೂಲ ಉದ್ದೇಶ ವಾಗಿರುತ್ತದೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದು ೩೯ ವರ್ಷಗಳು ಕಳೆದಿವೆ. ಈ ಮೂವತ್ತೊಂಭತ್ತು ವರ್ಷಗಳಲ್ಲಿ ಕಾಂಗ್ರೆಸ್‌ನವರು ೩೫ ವರ್ಷಗಳ ಕಾಲ ರಾಜ್ಯಭಾರ ಮಾಡಿದರು. ಕರ್ನಾಟಕದಲ್ಲಿ ಜನತಾಪಕ್ಷ ನಾಲ್ಕು ವರ್ಷಗಳ ಕಾಲ ಅಧಿಕಾರ ಸೂತ್ರವನ್ನು ಹಿಡಿದು ಆಡಳಿತವನ್ನು ನಡೆಸುತ್ತಿದೆ. ಈ ಮೂವತ್ತೊನಾಲ್ಕು ವರ್ಷ ಕಾಂಗ್ರೆಸ್ ಪಕ್ಷ ಏನೇನು ಕೆಲಸ ಮಾಡಿತು, ಜನತಾ ಕಲ್ಯಾಣಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿತು ಎನ್ನುವುದನ್ನು ಒಂದುಕಡೆ ಇಟ್ಟುಕೊಂಡು, ಇನ್ನೊಂದು ಕಡೆ ಕೇವಲ ನಾಲ್ಕು ವರ್ಷಗಳಲ್ಲಿ ಜನತಾ ಪಕ್ಷವು ಏನೇನು ಕಾರ್ಯಗಳನ್ನು ಮಾಡಿ ಸಾಧನೆ ಮಾಡಿದೆ ಎನ್ನುವ ಬಗ್ಗೆ ಎ ಮತ್ತು ಬಿ ಪಟ್ಟಿಯನ್ನು ಮಾಡಿ ನಾವು ಇಲ್ಲಿ ಚರ್ಚೆಯನ್ನು ಮಾಡುವುದು ಬೇಡ. ಸಾಮಾನ್ಯ ಪ್ರೈಮರಿ ಶಾಲೆಯಲ್ಲಿ ಓದುವ ಹುಡುಗರಿಗೆ ಈ ಎರಡು ಪಟ್ಟಿಯನ್ನು ಕೊಟ್ಟಲ್ಲಿ ಅವರು ಕಣ್ಣು ಮುಚ್ಚಿಕೊಂಡು ಜನತಾ ಪಕ್ಷ ಬಹಳ ಕೆಲಸ ಮಾಡಿದ್ದಾರೆ ಎನ್ನುವ ವಿಚಾರವನ್ನು ಹೇಳುತ್ತಾರೆ. ಇಷ್ಟೆಲ್ಲ ಒಳ್ಳೆಯ ಕೆಲಸ ನಡೆದ ಮೇಲೆಯೂ ಜಿಲ್ಲಾ ಪರಿಷತ್ತು ಚುನಾವಣೆಯಲ್ಲಿ ನಾವು ನಿರೀಕ್ಷಿಸಿದಷ್ಟು ಜನ ಗೆಲ್ಲಲಿಲ್ಲವೆಂದರೆ ನಮ್ಮಲ್ಲೂ ಕೂಡ ಅನೇಕ ಪ್ರಶ್ನೆಗಳು ಉದ್ಭವವಾಗುತ್ತದೆ. ಈ ಪ್ರಶ್ನೆಗೆ ಉತ್ತರ ಹುಡುಕಬೇಕೆಂದು ನನಗನಿಸುತ್ತದೆ. ನಾವು ೭೫ ಪರ್ಸೆಂಟ್ ಕೆಲಸ ಮಾಡಿದ್ದರೂ ಕೇವಲ ೨೫ ಪರ್ಸೆಂಟ್ ಪ್ರಚಾರ ಮಾತ್ರ ಮಾಡಿದ್ದೇವೆ. ಆದರೆ ಕಾಂಗ್ರೆಸ್ ಪಕ್ಷದವರು ಕೆವಲ ೨೫ ಪರ್ಸೆಂಟ್ ಕೆಲಸಮಾಡಿ ೭೫ ಪರ್ಸೆಂಟ್ ಪ್ರಚಾರವನ್ನು ಗಿಟ್ಟಿಸಿದ್ದೆ. ಜಿಲ್ಲಾ ಪರಿಷತ್ತಿನಲ್ಲಿ ಹೆಚ್ಚಿನ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.